# ಕಲ್ಯಾಣ ಕರ್ನಾಟಕದ ಸಾರಸ್ವತ ಮ್ಯೂಸಿಯಂ



**ಕನ್ನಡದ ಸಾಕ್ಷಿಪ್ರಜ್ಞೆಯ ಪ್ರಯೋಗಶಾಲೆಗಳಂತೆ ಕಾರ್ಯ ನಿರ್ವಹಿಸಬೇಕಾದ ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ಸಂಸ್ಥೆಗಳು ಪೌಷ್ಟಿಕಾಂಶ ಕೊರತೆಯಿಂದ ಬಳಲುತ್ತಿರುವ ಮಕ್ಕಳಂತೆ ಕಾಣಿಸುತ್ತಿವೆ. ಹೊಸ ಪರಿಕಲ್ಪನೆಗಳ ಕೊರತೆ ಹಾಗೂ ಸೃಜನಶೀಲತೆಯ ದಾರಿದ್ರ್ಯದಿಂದ ಬಳಲುತ್ತಿವೆ. ಇಂಥ ಸಂದರ್ಭದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ರೂಪಿಸಿರುವ ‘ಸಾಹಿತಿ–ಸಾಹಿತ್ಯ’ ಸಂಗ್ರಹಾಲಯ ವಿಶ್ವವಿದ್ಯಾಲಯವೊಂದು ಮಾಡಬೇಕಾದ ವಿಶಿಷ್ಟ ಕೆಲಸದ ರೂಪದಲ್ಲಿ ಗಮನಸೆಳೆಯುತ್ತದೆ.**

■ ಸತ್ಯಮಂಗಲ ಮಹಾದೇವ

ನಮ್ಮ ಹಿರಿಯ ವಿದ್ವಾಂಸರುಗಳು ಕನ್ನಡದ ಮಹತ್ವದ ಕೆಲಸಗಳನ್ನು ಮಾಡಿದಾಗಲೆಲ್ಲ, ‘ಒಂದು ವಿಶ್ವವಿದ್ಯಾಲಯ ಮಾಡುವ ಕೆಲಸವನ್ನು ನೀವು ಮಾಡಿದ್ದೀರಿ’ ಎನ್ನುವ ಮಾತು ಬಳಸುತ್ತೇವೆ. ಆ ಮಾತು ಕಾರ್ಯರೂಪಕ್ಕೆ ಬಂದ ಕೆಲಸದ ಅಗಾಧತೆಯನ್ನು ಸೂಚಿಸುವಂತೆಯೇ, ನಮ್ಮ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ನಿಷ್ಕ್ರಿಯವಾಗಿರುವುದನ್ನೂ ಸೂಚಿಸುತ್ತದೆ. ಹಿಂದೊಮ್ಮೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ‘ಕನ್ನಡ ಪ್ರಜ್ಞೆ’ಯ ರೂಪದಲ್ಲಿ ಕೆಲಸ ಮಾಡುತ್ತಿದ್ದವು. ಕನ್ನಡ ಪ್ರಜ್ಞೆಯನ್ನು ಕಟ್ಟುವ, ಕನ್ನಡದ ವಿವೇಕವನ್ನು ರೂಪಿಸುವ ಪ್ರಯೋಗಶಾಲೆಗಳಾಗಿ ಸಕ್ರಿಯವಾಗಿದ್ದವು. ಈಗ ವಿ.ವಿ.ಗಳ ಕನ್ನಡ ವಿಭಾಗಗಳು ಗತ ನೆನಪುಗಳ ಪಳೆಯುಳಿಕೆಗಳಂತೆ ಕಾಣಿಸುತ್ತಿವೆ. ಕರ್ನಾಟಕದ ‘ಅನುಭವ ಮಂಟಪ’ದಂತೆ ಇರಬೇಕಾದ ಕೇಂದ್ರಗಳಿಗೆ ಜಡತ್ವ ಆವರಿಸಿಕೊಂಡಿರುವ ಸಂದರ್ಭದಲ್ಲಿ, ವಿಶಿಷ್ಟ ಬಗೆಯ ‘ಕನ್ನಡ ಕಾಯಕ’ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಾಕಾರಗೊಂಡಿದೆ.

ಕಲ್ಯಾಣ ಕರ್ನಾಟಕದ (ಹೈದರಾಬಾದ್ ಕರ್ನಾಟಕದ) ಕವಿಗಳು, ಕಥೆಗಾರರು, ಬರಹಗಾರರ ಕೃತಿಗಳನ್ನು ಗುಲಬರ್ಗಾ ವಿ.ವಿ. ಕನ್ನಡ ಅಧ್ಯಯನ ಸಂಸ್ಥೆ ಸಂಗ್ರಹಿಸಿ ಒಂದೆಡೆ ಸಿಗುವಂತೆ ಮಾಡಿದೆ. ಕೃತಿಗಳು ಮಾತ್ರವಲ್ಲ, ಬರಹಗಾರರ ಭಾವಚಿತ್ರಗಳನ್ನೂ ಸಂಗ್ರಹಿಸಿ ಪ್ರದರ್ಶಿಸಿದೆ. ಈ ಚಿತ್ರಪಟಗಳು ಹಾಗೂ ಪುಸ್ತಕಗಳನ್ನು ನೋಡುತ್ತಿದ್ದರೆ, ‘ಕಲ್ಯಾಣ ಕರ್ನಾಟಕದ ಸಾರಸ್ವತ ಮ್ಯೂಸಿಯಂ’ನಲ್ಲಿ ಅಡ್ಡಾಡಿದಂತೆ ಭಾಸವಾಗುತ್ತದೆ.

ಅಧ್ಯಯನ ಸಂಸ್ಥೆಯ ಸಂಗ್ರಹಕ್ಕೆ ವಿಶೇಷ ಮಹತ್ವವಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೈದರಾಬಾದ್ ಕರ್ನಾಟಕ ಭಾಗದ ಸಾಹಿತ್ಯದ ಕೊಡುಗೆ ದೊಡ್ಡದು. ಕಲ್ಯಾಣ ಕರ್ನಾಟಕದ ಬಿಸಿಲು ಮತ್ತು ಬೆಳದಿಂಗಳು ಎರಡನ್ನೂ ಕಾವ್ಯ–ಕಥನದಲ್ಲಿ, ಅಲ್ಲಿನ ಭಾಷಾ ಸೊಗಡಿನೊಂದಿಗೆ ಅನೇಕ ಲೇಖಕರು ಹಿಡಿದಿಟ್ಟಿದ್ದಾರೆ. ಕನ್ನಡ ಸಾಹಿತ್ಯದ ವಾರ್ಷಿಕ ಸಂಭ್ರಮವಾದ ‘ಪ್ರಜಾವಾಣಿ’ ದೀಪಾವಳಿ ಸ್ಪರ್ಧೆಯ ಬಹುಮಾನಿತ ಕಥೆಗಳ ಪಟ್ಟಿಯ ಮೇಲೆ ಕಣ್ಣಾಡಿಸಿದರೆ, ಹೈದರಾಬಾದ್ ಕರ್ನಾಟಕ ಭಾಗದ ಕಥೆಗಾರರು ಸಾಲುದೀಪಗಳಂತೆ ಎದ್ದು ಕಾಣುತ್ತಾರೆ. ಆರ್ಥಿಕವಾಗಿ ಹಿಂದುಳಿದಿದ್ದರೂ ಸಾಂಸ್ಕೃತಿಕವಾಗಿ ಸಮೃದ್ಧವಾದ ಮಣ್ಣಿನ ತವಕತಲ್ಲಣಗಳ ಅಧ್ಯಯನಕ್ಕೆ ಆ ಭಾಗದ ಸಾಹಿತ್ಯ ಉಪಯುಕ್ತ ಆಕರವಾಗಿದೆ. ಆದರೆ, ಹೈದರಾಬಾದ್ ಕರ್ನಾಟಕ ಭಾಗದ ಲೇಖಕರ ಬಿಡಿ ಬಿಡಿ ಕೃತಿಗಳು ಅಲ್ಲಲ್ಲಿ ಲಭ್ಯವೇ ಹೊರತು, ಆ ಕೃತಿಗಳನ್ನು ಒಂದೇ ಸೂರಿನಲ್ಲಿ ನೋಡುವುದು ಕಷ್ಟ. ಈ ಸವಾಲಿಗೆ ಉತ್ತರದ ರೂಪದಲ್ಲಿ ಗುಲಬರ್ಗಾ ವಿ.ವಿ. ಸಂಗ್ರಹವನ್ನು ನೋಡಬಹುದು.

ಪ್ರೊ. ಎಚ್.ಟಿ. ಪೋತೆ ಗುಲಬರ್ಗಾ ವಿ.ವಿ.ಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ಹಾಗೂ ಕಲಾ ನಿಕಾಯದ ಡೀನ್. ಸ್ವತಃ ಸೃಜನಶೀಲ ಬರಹಗಾರರಾದ ಪೋತೆ ಅವರ ಕನಸು ಕನವರಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಭಾಗದ ಲೇಖಕರ ಸಾಹಿತ್ಯ ವಿಶ್ವವಿದ್ಯಾಲಯದಲ್ಲಿ ಒಟ್ಟುಗೂಡಿದೆ. ಈ ಸಂಗ್ರಹ ಕಲ್ಯಾಣ ಕರ್ನಾಟಕದ ಸಾಹಿತಿ–ಸಾಹಿತ್ಯದ ವಿಸ್ತೃತ ಅಧ್ಯಯನಕ್ಕೆ ಅವಕಾಶ ಕಲ್ಪಿಸುವ ಪ್ರಯತ್ನವಾಗಿದೆ.

ಹಾ.ಮಾ. ನಾಯಕ ಅವರು ಉಪ ಕುಲಪತಿಗಳಾಗಿದ್ದ ಸಂದರ್ಭದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಕಟ್ಟುವ ಕೆಲಸಕ್ಕೆ ಹೊಸ ದಿಕ್ಕು ದೊರೆಯಿತು. ಕರ್ನಾಟಕ ಸರ್ಕಾರ ನೀಡುವ ‘ರಾಜ್ಯೋತ್ಸವ ಪ್ರಶಸ್ತಿ’ಗಳ ಮಾದರಿಯಲ್ಲಿ, ಗುಲಬರ್ಗಾ ವಿಶ್ವವಿದ್ಯಾಲಯವೂ ತನ್ನ ಭಾಗದ ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡುತ್ತಿದೆ. ಪ್ರತಿ ವರ್ಷ, ಹೈದರಾಬಾದ್ ಕರ್ನಾಟಕ ಭಾಗದ ಲೇಖಕರ ಉತ್ತಮ ಕೃತಿಗಳನ್ನು ಗುರ್ತಿಸಿ ಗೌರವಿಸಲಾಗುತ್ತದೆ. ಜಯತೀರ್ಥ ಪುರೋಹಿತರ ಸ್ಮರಣೆಯಲ್ಲಿ ವಾರ್ಷಿಕ ಕಥಾಸ್ಪರ್ಧೆ ನಡೆಸಿ, ವಿಜೇತರಿಗೆ ಚಿನ್ನದ ಪದಕ ನೀಡಲಾಗುತ್ತಿದೆ. ರಾಜ್ಯೋತ್ಸವ ಪ್ರಶಸ್ತಿಗಳು



ತಾವು ರೂಪಿಸಿದ ಸಾರಸ್ವತ ಮ್ಯೂಸಿಯಂನಲ್ಲಿ ಪ್ರೊ. ಎಚ್.ಟಿ. ಪೋತೆ